ಮನಸ್ಸು ಮೃದುವಾಗಿದ್ದು.

'ಅರೆ, ನೀನು ಪುರುಷೋತ್ತಮ್ ಮಗಳು ತಾನೇ.'

ವನಿತಾ ಆತ್ಮೀಯವಾಗಿ ಕೇಳಿದಾಗ ಪ್ರಕೃತಿಗೆ ಅಚ್ಚರಿಯಾಗಿತ್ತು.

'ನಿಮಗೆ ನಮ್ಮಪ್ಪ ಗೊತ್ತಾ...' ಎಂದು ಹುಬ್ಬೇರಿಸಿದಳು.

'ನಿಮ್ಮಪ್ಪ, ನಿಮ್ಮಮ್ಮ, ನಿಮ್ಮಜ್ಜಿ, ನಿಮ್ಮ ತಾತ... ಎಲ್ರೂ ಗೊತ್ತು. ನಾನು ನಿಮ್ಮ ಫ್ಯಾಮಿಲಿ ಫ್ರೆಂಡು... ಗೊತ್ತಾ...'

'ವಾವ್ ಸೋ ನೈಸ್ ಆಂಟೀ, ನಿಮ್ಮ ಹೆಸರೇನು ಆಂಟಿ?'

'ನಾನಾ... ನಾನು... ನಾನು... ತಾರಾ ಅಂತ...' ವನಿತಾ ತಡವರಿಸಿದಾಗ, ಪುಷ್ಪಲತಾ ಕತ್ತೆತ್ತಿ ಇಬ್ಬರನ್ನೂ ನೋಡಿ ಏನೋ ಅರ್ಥವಾದಂತೆ ತನ್ನ ಪಾಡಿಗೆ ತಾನು ಫೈಲುಗಳನ್ನು ಜೋಡಿಸಲಾರಂಭಿಸಿದಳು ಮುಗುಳ್ನಗುತ್ತ.

'ತಾರಾ ಆಂಟೀ, ನಾನು ಎಷ್ಟು ಹ್ಯಾಪಿಯಾಗಿದ್ದೆ ಗೊತ್ತಾ, ಅಪ್ಪಅಮ್ಮ, ನನ್ನ ತಮ್ಮ ಪ್ರಣೀತ, ನಮ್ಮಜ್ಜಿ, ನಮ್ಮ ತಾತ ನಾವೆಲ್ಲ ಎಷ್ಟು ಖುಷಿ ಖುಷಿಯಾಗಿದ್ವಿ ಗೊತ್ತಾ, ಬಹುಶಃ ನೀವೂ ಅಮೆರಿಕಾದಲ್ಲಿದ್ರೀಂತ ಕಾಣುತ್ತೆ. ಯಾಕೆ ಅಂದ್ರೆ ನೀವು ಒಂದಿನಾನೂ ನಮ್ಮನೆಗೆ ಬಂದಿಲ್ಲ. ನಾವೆಷ್ಟು ಹ್ಯಾಪಿಯಾಗಿದ್ವೀ ಅಂತಾ ನಿಮಗೆ ಗೊತ್ತಿಲ್ಲ. ಈಗ ಮನೇಲಿ ಮಾತಾಡ್ತಿದಾರೆ ನನ್ನ ಮಮ್ಮಿ ಬೇರೆಯಂತೇ... ಅವರು ನನ್ನ, ನನ್ನ ಅಪ್ಪನ್ನ ಬಿಟ್ಟು ಅಮೆರಿಕಾಗೆ ಹೊರಟು ಹೋಗಿದ್ರಂತೆ. ಈಗ ವಾಪಸ್ ಬಂದಿದಾರಂತೇ... ಈಗ ನಾನು ಅವರ ಜೊತೆಗೆ ಹೋಗಬೇಕಂತೇ.. ಅದು ಹೇಗೆ ಸಾಧ್ಯ ಹೇಳೀ ಆಂಟಿ... ನಾನು ಯಾವತ್ತೂ ನೋಡದೇ ಇರೋ ಆ ಹೆಂಗಸಿನ ಜೊತೆಗೆ ನಾನು ಹೇಗೆ ಹೋಗೋಕಾಗತ್ತೆ? ಅವಳು ನನ್ನಮ್ಮ ಅಂತ ನಂಗೇನು ಗೊತ್ತು. ನಂಗೆ ಹೊಟ್ಟೆ ನೋವು ಬಂದ್ರೆ, ನಂಗೆ ತುಂಬಾ ಬ್ಲೀಡೀಂಗ್ ಆದ್ರೆ ಗುಟ್ಟು ಗುಟ್ಟಾಗಿ ಹೇಳ್ತೀನಿ. ಯಾಕೆ ಅಂದ್ರೆ ಅವರಿಗೆ ನನ್ನೆಲ್ಲ ವಿಷಯ ಗೊತ್ತು. ನಂಗೇನು ಬೇಕು, ನಂಗೇನು ಬೇಡ ಎಲ್ಲ ಅವರಿಗೆ ಗೊತ್ತು. ನಾನಿಲ್ಲ ಅಂದ್ರೆ ಅಪ್ಪಂಗೆ ತುಂಬಾ ಕಷ್ಟವಾಗುತ್ತೆ. ನಂಗಂತೂ ಅಪ್ಪನ್ನ ಬಿಟ್ಟಿರೋದೇ ನೆನಪಿಲ್ಲ. ನಂಗೆ ಜ್ವರ ಬಂದ್ರೆ, ಶೀತ ಆದರೆ ಅಪ್ಪ ಎಷ್ಟು ಒದ್ದಾಡ್ತಾರೆ ಗೊತ್ತಾ... ಅಜ್ಜಿತಾತಂಗಂತೂ ನಾನಂದ್ರೆ ಜೀವ. ಇವರನ್ನೆಲ್ಲ ಬಿಟ್ಟು ನಾನು ಹೇಗೆ ಆ ಹೆಂಗಸಿನ ಜೊತೆ ಹೋಗೋಕಾಗುತ್ತೆ? ನನಗೂ ನನ್ನದೇ ಆದ ಭಾವನೆಗಳಿವೆ, ನನ್ನದೇ ಆಗಿರೋ ಕನಸುಗಳಿವೆ. ನನ್ನದೇ ಆಗಿರೋ ಜೀವನವನ್ನ ಹೇಗೆಲ್ಲ ರೂಪಿಸಿಕೊಳ್ಳಬೇಕು ಅನ್ನುವ ಆಲೋಚನೆಗಳಿವೆ. ಭಯ ಕೂಡಾ ಆಗುತ್ತೆ. ಪ್ರೀತಿ – ಪ್ರೇಮ ಹೀಗೇ ಏನೇನೋ ಹೊಸ ಹೊಸ ಅನಿಸಿಕೆಗಳು ಮೂಡುತ್ತವೆ. ಆ ಹೆಂಗಸಿಗೆ ಮಕ್ಕಳಿಲ್ವಂತೆ, ಅದಕ್ಕೆ ನನ್ನ ಬೇಕು ಅಂತಿದ್ದಾಳಂತೆ. ಅವಳಿಗೊಂದು ಮಗುವಾಗಿದ್ದಿದ್ರೆ ನನ್ನನ್ನು ತಿರುಗಿಯೂ ಸಹ ನೋಡ್ತಿರಲಿಲ್ಲ. ಅವಳಿಗೆ ಬೇಕಾದಾಗ ಬೇಕು, ಬೇಡವಾದಾಗ ಬೇಡಾ ಅನ್ನೋದಕ್ಕೆ ನಾವೇನು ಆಟದ ಗೊಂಬೆಗಳಾ? ಹೇಳಿ ಆಂಟೀ... ಅದಕ್ಕೇ... ನಾನು ಊರ್ಮಿಳಾ ಮೇಡಂ ಹತ್ರ ನನ್ನ ಕಷ್ಟ ಹೇಳ್ಕೊಂಡು, ನನ್ನನ್ನು ನಮ್ಮನೇಲೇ ಇರೋ ಹಾಗೇ ಮಾಡೀಂತ ಕೇಳೋಕೆ ಬಂದೆ... ಪ್ಲೀಸ್ ಹೆಲ್ಪ್ ಮಾಡ್ತೀರಾ ಆಂಟೀ, ನಾನು ಹೇಳಿದ್ದೆಲ್ಲ ಊರ್ಮಿಳಾ ಮೇಡಂಗೆ ಹೇಳಿ ನನ್ನನ್ನು ಆ ಹೆಂಗಸಿನಿಂದ ಕಾಪಾಡ್ತೀರಾ... ಪ್ಲೀಸ್.'

ವನಿತಾಳ ಕೈ ಹಿಡಿದು ಆರ್ತವಾಗಿ ಹೇಳುತ್ತ... ಹೇಳುತ್ತ... ಬಿಕ್ಕಳಿಸತೊಡಗಿದಾಗ ವನಿತಾಳ ಮುಖ ಬೆಳ್ಳಗೆ ಬಿಳಿಚಿಕೊಂಡಿತ್ತು. ಯಾರೋ ಕಾಪಾಳಕ್ಕೆ ರಾಚಿದಂತಾಗಿ ಬೆವರಿಬಿಟ್ಟಳು.

ದುಃಖದಿಂದ ಕಂಪಿಸುತ್ತಿರುವ ಆ ಪುಟಾಣಿ ಹುಡುಗಿಯ ಭಾವನೆಗಳು ಪದ ಪದಗಳಾಗಿ,